**ಕರ್ನಾಟಕ ಸರ್ಕಾರ**

**ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.**

**ದಿ:25-07-2016**

**ಸಂ.ಕಂ/ತಖ/ವಿವಾದ/79/2014-15**

| ವಾದಿಗಳು | ವಿರುದ್ಧ | ಪ್ರತಿವಾದಿಗಳು |
|---|---|---|
| ವಿ.ಪಲ್ಲವಿ ಗಂಡ ಲೇಟ್ ವಿ.ವಿಜಯಕುಮಾರ<br>ನಾಗಿನಹಾಳು ಗ್ರಾಮ. ಸಿರುಗುಪ್ಪ (ತಾ) | | ವಿ.ಗೌರಮ್ಮ ಗಂಡ ವಕೀಲ್ ಬಸವನಗೌಡ<br>15 ನೇ ವಾರ್ಡ್, ಸಿರುಗುಪ್ಪ |

ವಿವಾದಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕರ್ಚಿಗನೂರು | 72/ಬಿ/1 | 5-97 | ಖುಷ್ಕಿ |

ಪೀಠಿಕೆ:-

ಸಿರುಗುಪ್ಪ ತಾಲೂಕು ಕರ್ಚಿಗನೂರು ಗ್ರಾಮದ ಸ,ನಂ. 72/ಬಿ/1 ವಿ:5-97 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ವಿ.ವಿಜಯಕುಮಾರ ತಂದೆ ವಕೀಲ್ ಬಸವನಗೌಡ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:31-10-2014 ರಂದು ಮರಣ ಹೊಂದಿದ್ದು, ಮೃತರ ವಾರಸು ಪತ್ನಿಯಾದ ವಿ.ಪಲ್ಲವಿ ಗಂಡ ಲೇಟ್ ವಿ.ವಿಜಯಕುಮಾರ್ ಇವರು ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಕೋರಿ ಸಲ್ಲಿಸಿದ ಅರ್ಜಿ ಮೇರೆಗೆ, ಸದ್ರಿಯವರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಕರ್ಚಿಗನೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ವಿ.ಗೌರಮ್ಮ ಗಂಡ ಲೇಟ್ ವಕೀಲ್ ಬಸವನಗೌಡ** ಇವರು "ಪ್ರಸ್ತಾಪಿತ ಜಮೀನು ತಮ್ಮ ಮಗನ ಹೆಸರಿನಲ್ಲಿದ್ದು, ಸದ್ರಿ ಜಮೀನನ್ನು ತಮ್ಮ ಜೀವನಾಂಶಕ್ಕಾಗಿ ಬಿಟ್ಟುಕೊಟ್ಟಿರುವ ಆಸ್ತಿಯಾಗಿರುತ್ತದೆ. ತಮಗೆ ಸುಮಾರು 72 ವರ್ಷ ವಯಸ್ಸಾಗಿದ್ದು, ಸದ್ರಿ ಜಮೀನಿನ ಉತ್ಪನ್ನದಿಂದಲೇ ತನ್ನ ಕುಟುಂಬದ ಜೀವನ ನಡೆಯುತ್ತಿದ್ದು, ಸದ್ರಿ ಜಮೀನಿಗೆ ಪೋತಿವಾರಸು ಮೇರೆಗೆ ತನ್ನ ಸೊಸೆ ಸಲ್ಲಿಸಿದ ಅರ್ಜಿಯ ಮೇರೆಗೆ ಯಾರ ಹೆಸರಿಗೂ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:22-01-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಕ.ಖ.ಸಂಖ್ಯೆ:08/2014-15 ದಿನಾಂಕ:26-02-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:24-07-2015 ರಿಂದ

(80)

20-06-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ ವಿ.ಗೌರಮ್ಮ ಗಂಡ ಲೇಟ್ ವಕೀಲ್ ಬಸವನಗೌಡ ಇವರು ಮೊದಲಿಗೆ, ಪ್ರಸ್ತಾಪಿತ ಜಮೀನಿನಿಂದಲೇ ತನ್ನ ಜೀವನ ನಿರ್ವಹಣೆ ನಡೆಯುತ್ತಿದ್ದು, ಪ್ರಸ್ತುತ ಅರ್ಜಿದಾರಳ ಹೆಸರಿಗೆ ಪಟ್ಟಾ ಬದಲಾವಣೆ ಮಾಡಬಾರದೆಂದು ತಿಳಿಸಿದರು, ನಂತರ ಪ್ರಸ್ತಾಪಿತ ಜಮೀನಿನ ವ್ಯಾಜ್ಯಕ್ಕೆ ಸಂಭಂಧಿಸಿ ಗ್ರಾಮದ ಹಿರಿಯರ ಸಮಕ್ಷಮ ರಾಜೀಯಾಗಿದ್ದು, ಸದ್ರಿ ಜಮೀನನ್ನು ತನ್ನ ಸೊಸೆ ವಿ.ಪಲ್ಲವಿ ಗಂಡ ಲೇಟ್ ವಿ.ವಿಜಯಕುಮಾರ್ ಇವರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು, ತಾನು ಸಲ್ಲಿಸಿದ ತಕರಾರು ಅರ್ಜಿಯನ್ನು ವಾಪಾಸು ಪಡೆಯುವುದಾಗಿ ರೂ.20/-ರ ಛಾಪಾ ಕಾಗದದಲ್ಲಿ ದಿ:16-05-2016 ರಂದು ನೋಟರಿ ಸಮಕ್ಷಮ ಪ್ರಮಾಣೀಕರಿಸಿದ ಅಫಿಡೆವಿಟ್‌ನ್ನು ಹಾಜರುಪಡಿಸಿರುತ್ತಾರೆ.

ಆದ್ದರಿಂದ, ಸಿರುಗುಪ್ಪ ತಾಲೂಕು ಕರ್ಚಿಗನೂರು ಗ್ರಾಮದ ಸ,ನಂ.72/ಬಿ/1 ವಿ:5-97 ಎಕ್ರೆ ಜಮೀನಿಗೆ ಸಂಭಂದಿಸಿ, ಪೋತಿ ವಾರಸು ಮೇರೆಗೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/79/2014-15** **ದಿ:25-07-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕರ್ಚಿಗನೂರು ಗ್ರಾಮದ ಸ,ನಂ. 72/ಬಿ/1 ವಿ:5-97 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ವಿ.ವಿಜಯಕುಮಾರ ತಂದೆ ವಕೀಲ್ ಬಸವನಗೌಡ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿನಾಂಕ:31-10-2014 ರಂದು ಮರಣ ಹೊಂದಿರುವುದರಿಂದ ಮೃತರ ವಾರಸು ಪತ್ನಿಯಾದ ವಿ.ಪಲ್ಲವಿ **ಗಂಡ ಲೇಟ್ ವಿ.ವಿಜಯಕುಮಾರ್** ಇವರ ಹೆಸರಿಗೆ ಪೋತಿ ಪಟ್ಟಾ ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-07-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ತಹಶೀಲ್ದಾರರ ನ್ಯಾಯಾಲಯ ಸಿರುಗುಪ್ಪ